**2. ಪರಿಭಾಷೆಗಳು:-** ಈ ಆದೇಶದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:

(ಎ) "ಅಧಿನಿಯಮ" ಎಂದರೆ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964;

(ಬಿ) "ನಿಯಮಗಳು" ಎಂದರೆ, ಕರ್ನಾಟಕ ಭೂ ಕಂದಾಯ ನಿಯಮಗಳು, 1966;

(ಸಿ) "ಗೊತ್ತುಪಡಿಸಿದ ಅಧಿಕಾರಿ" ಎಂದರೆ, ಈ ಆದೇಶದ ಖಂಡ 3 ರ ಅಡಿಯಲ್ಲಿ ಗೊತ್ತುಪಡಿಸಿದ ಅಧಿಕಾರಿ;

(ಡಿ) "ಬಿ" ಖಾತಾ ಎಂದರೆ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಉದ್ಭವಿಸುವ ಕಾರಣಗಳಿಗಾಗಿ ನಿಯಮಿತ ಆಸ್ತಿ ರಿಜಿಸ್ಟರ್/"ಎ" ಖಾತಾದಲ್ಲಿ ಸೇರ್ಪಡೆಗೊಳಿಸಲು ಅರ್ಹವಲ್ಲದ ಆಸ್ತಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆ ಅಥವಾ ಗ್ರಾಮೀಣ ಸ್ಥಳೀಯ ಸಂಸ್ಥೆಯು ನಿರ್ವಹಿಸಿದ ಮೌಲ್ಯಮಾಪನ ಅಥವಾ ಆಸ್ತಿ ದಾಖಲೆ;

(ಇ) "ಎ" ಖಾತಾ ಎಂದರೆ ಅನ್ವಯವಾಗುವ ಮುನ್ಸಿಪಲ್, ಪಂಚಾಯತ್ ಮತ್ತು ಯೋಜನಾ ಕಾನೂನುಗಳಿಗೆ ಅನುಗುಣವಾಗಿ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆ ಅಥವಾ ಗ್ರಾಮೀಣ ಸ್ಥಳೀಯ ಸಂಸ್ಥೆಯು ನಿರ್ವಹಿಸಲಾದ ಸೂಕ್ತ ಆಸ್ತಿ ದಾಖಲೆ;

(ಎಫ್) "ಅರ್ಹ ಆಸ್ತಿ" ಎಂದರೆ ಈ ಆದೇಶದಲ್ಲಿ, ಯುಡಿಡಿ ಯ ಸಚಿವ ಸಂಪುಟದ ನಿರ್ಣಯ ಸಿ431/2026, ದಿನಾಂಕ: 13.08.2026, ಆರ್‌ಡಿಪಿಆರ್ ನ ಸಚಿವ ಸಂಪುಟದ ನಿರ್ಣಯ ಸಿ461/2026, ದಿನಾಂಕ: 21.08.2026 ಮತ್ತು ಕಾನೂನಿನ ಅನ್ವಯವಾಗುವ ಉಪಬಂಧಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿರುವ ಪ್ಲಾಟ್/ ನಿವೇಶನ/ ಜಮೀನು.

3. **ಗೊತ್ತುಪಡಿಸಿದ ಅಧಿಕಾರಿಗಳು:-** (1) ಅಧಿನಿಯಮದ ಪ್ರಕರಣ 96(4) ಮತ್ತು ಈ ಆದೇಶದ ಉದ್ದೇಶಗಳಿಗಾಗಿ, ಈ ಕೆಳಗಿನ ಅಧಿಕಾರಿಗಳು ಅವರವರ ಅಧಿಕಾರವ್ಯಾಪ್ತಿಯಲ್ಲಿರುವ ಗೊತ್ತುಪಡಿಸಿದ ಅಧಿಕಾರಿಗಳಾಗಿರತಕ್ಕದ್ದು:—

(ಎ) ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ—

i. ಪುರಸಭೆ (TMC) ಮತ್ತು ಪಟ್ಟಣ ಪಂಚಾಯತಿಯ ಮುಖ್ಯ ಅಧಿಕಾರಿ;
ii. ನಗರಸಭೆಯ (CMC) ಆಯುಕ್ತರು ; ಮತ್ತು
iii. ನಗರ ಪಾಲಿಕೆಯ ವಲಯ ಆಯುಕ್ತರು;

(ಬಿ) ಗ್ರಾಮೀಣ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ—

i. ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ)

(2) ಗೊತ್ತುಪಡಿಸಿದ ಅಧಿಕಾರಿಯು, ಅಧಿನಿಯಮ, ನಿಯಮಗಳು, ಯುಡಿಡಿ ಯ ಸಚಿವ ಸಂಪುಟದ ನಿರ್ಣಯ ಸಿ431/2026, ದಿನಾಂಕ: 13.08.2026, ಆರ್‌ಡಿಪಿಆರ್ ನ ಸಚಿವ ಸಂಪುಟದ ನಿರ್ಣಯ